2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ ಹಾಗೂ ವಿಶೇಷ ನ್ಯಾಯಾಲಯ ದಾವಣಗೆರೆ .

SC.ST. No.09-2020

ದೋ.ಸಾ. 27

ಫ್ರಾ.ಸಾ. 13

ಪ್ರ.ವ.ಬೊ.ದಿನಾಂಕ. 13-02-2026

| | | |
|---|---|---|
| ಹೆಸರು ಶ್ರೀ/ ಶ್ರೀ ಮತಿ. | - | ರೂಪ ತೆಂಬದ್ |
| ತಂದೆ / ಗಂಡನ ಹೆಸರು | - | ನಟರಾಜ್ ತೆಂಬದ್ |
| ವಯಸ್ಸು | - | 43 |
| ಉದ್ಯೋಗ | - | ಪಿಐ, ಡಿಜಿ ಮತ್ತು ಐಜಿಪಿ ಕಛೇರಿ, ಬೆಂಗಳೂರು |
| ವಾಸ ಸ್ಥಳ | - | ಬೆಂಗಳೂರು |

ಮುಖ್ಯವಿಚಾರಣೆಃ - ಮಾನ್ಯ ಸರ್ಕಾರಿ ಅಭಿಯೋಜಕರಿಂದ

ನಾನು ಮಾರ್ಚ್ 2019 ರಿಂದ ಸೆಪ್ಟೆಂಬರ್ 2021 ರವರೆಗೆ ವಿದ್ಯಾ ನಗರ ಪೋಲೀಸ್ ಠಾಣೆಯಲ್ಲಿ ಪಿಎಸ್ಐ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ಈ ಪ್ರಕರಣದಲ್ಲಿ ದಿಃ 13-11-2019 ರಂದು ಮಧ್ಯಾಹ್ನ 1-15 ಗಂಟೆಗೆ ನಾನು ಠಾಣೆಯ ಪ್ರಭಾರದಲ್ಲಿ ಇರುವಾಗ ಫ್ರಾ.ಸಾ.1 ರವರು ಠಾಣೆಗೆ ಆಗಮಿಸಿ ನೀಡಿದ ಲಿಖಿತ ದೂರನ್ನು ಸ್ವೀಕರಿಸಿ ಠಾಣಾ ಗುನ್ನ ನಂ.143/2019 ರಂತೆ ಪ್ರಕರಣವನ್ನು ದಾಖಲಿಸಿಕೊಂಡು ಪ್ರ.ವ.ವರದಿಯನ್ನು ತಯಾರಿಸಿ ನ್ಯಾಯಾಲಯಕ್ಕೂ ಹಾಗೂ ಮೇಲಾಧಿಕಾರಿಗಳಿಗೆ ಸಲ್ಲಿಸಿರುತ್ತೇನೆ. ದೂರು ಈಗಾಗಲೆ ನಿ.ಪಿ.1 ಎಂದು ಗುರುತಿಸಲಾಗಿದ್ದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿ.ಪಿ.1(ಬಿ) ಎಂದು ಗುರುತಿಸಲಾಯಿತು. ಪ್ರ.ವ.ವರದಿಯನ್ನು ನಿ.ಪಿ.45 ಎಂದು ಹಾಗೂ ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿ.ಪಿ.45(ಎ) ಎಂದು ಗುರುತಿಸಲಾಯಿತು. ಪ್ರಕರಣವು ಘೋರ ಅಪರಾಧ ಆಗಿರುವ ಕಾರಣ ಕಡತವನ್ನು ಚಾ.ಸಾ.28 ರವರಿಗೆ ಹಸ್ತಾಂತರಿಸಿರುತ್ತೇನೆ.

ದಿಃ 18-11-2019 ರಂದು ಚಾ.ಸಾ.28 ರವರು ನೀಡಿದ ಜ್ಞಾಪನವನ್ನು ಸ್ವೀಕರಿಸಿ ದಿಃ 26-11-2019 ರಂದು ಫ್ರಾ.ಸಾ.8 ರವರನ್ನು ಚಾ.ಸಾ.28 ರವರ ಸಮಕ್ಷಮ ಹಾಜರುಪಡಿಸಿರುತ್ತೇನೆ. ಸದರಿ ಜ್ಞಾಪನವನ್ನು ಸಾಕ್ಷಿಯು ನೋಡಿ ಗುರುತಿಸಿದ್ದು, ಅದನ್ನು ನಿ.ಪಿ.46 ಎಂದು ಗುರುತಿಸಲಾಯಿತು. ನಂತರ ಅದೇ ದಿನ ಚಾಸಾ.28 ರವರು ಆರೋಪಿಗೆ 41 ಎ ಸಿಆರ್ ಪಿಸಿ ನೋಟೀಸನ್ನು ಜಾರಿ ಮಾಡಲು ತಿಳಿಸಿದ್ದು, ಅದರಂತೆ ಆರೋಪಿಗೆ ನೋಟೀಸನ್ನು ಜಾರಿ ಮಾಡಿರುತ್ತೇನೆ. ಸದರಿ ನೋಟೀಸನ್ನು ನಿ.ಪಿ.47 ಎಂದು ಗುರುತಿಸಲಾಯಿತು. ನ್ಯಾಯಾಲಯದ ಮುಂದೆ ಇರುವ ಆರೋಪಿಯನ್ನು ನೋಡಿ ಸಾಕ್ಷಿಯು ಗುರುತಿಸಿರುತ್ತಾರೆ.

**ಪಾಟೀಸವಾಲುಃ ಆರೋಪಿ ಪರ ವಕೀಲರಿಂದ.**

ನಿ.ಪಿ.1 ರ ಶರಾದಲ್ಲಿ ಎಸ್ ಸಿ ಎಸ್ ಟಿ ಆ್ಯಕ್ಟ್ 2016 ಎಂದು ತದನಂತರ ಬರೆಯಲಾಗಿದ್ದು, ಅದರ ಕೆಳಗಡೆ ಚಿಕ್ಕ ರುಜು ಮಾಡಲಾಗಿಲ್ಲ ಎಂದರೆ ಸರಿ. ಫ್ರಾ.ಸಾ.8 ರವರನ್ನು ನಾನು ಎಲ್ಲಿಂದ ಕರೆದುಕೊಂಡು ಬಂದೆ ಎನ್ನುವ

ಕುರಿತಾಗಿ ಹಾಗೂ ಎಷ್ಟು ಗಂಟೆಗೆ ಆತನನ್ನು ಚಾ.ಸಾ.28 ರವರ ಸಮಕ್ಷಮ ಹಾಜರುಪಡಿಸಿದ್ದೇನೆ ಎನ್ನುವ ಕುರಿತಾಗಿ ಪ್ರತ್ಯೇಕ ವರದಿ ನೀಡಿರುವುದಿಲ್ಲ ಎಂದರೆ ಸರಿ. ಸಾಕ್ಷಿಗೆ ನಿ.ಪಿ.47 ನೋಟೀಸನ್ನು ನಾನೇ ಸ್ವತಃ ಹೋಗಿ ಆರೋಪಿಗೆ ಜಾರಿ ಮಾಡಿರುತ್ತೇನೆ. ನಾನು ಯಾವುದೇ ನೋಟೀಸನ್ನು ಆರೋಪಿಗೆ ಜಾರಿ ಮಾಡಿರುವುದಿಲ್ಲ, ನಾನು ಪ್ರಾ.ಸಾ.1 ರವರ ಮಾತನ್ನು ಕೇಳಿಕೊಂಡು ಸುಳ್ಳು ಸಾಕ್ಷಿಯನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆಃ- ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ . ಹೇ. ಕೇ. ಸರಿಯಾಗಿದೆ.

2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ದಾವಣಗೆರೆ.

2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ ಹಾಗೂ ವಿಶೇಷ ನ್ಯಾಯಾಲಯ ದಾವಣಗೆರೆ .

SC.ST. No.09-2020

ದೋ.ಸಾ. 18
ಫ್ರಾ.ಸಾ. 12
ಪ್ರ.ವ.ಬೊ.ದಿನಾಂಕ. 13-02-2026

| | | |
|---|---|---|
| ಹೆಸರು ಶ್ರೀ/ ಶ್ರೀ ಮತಿ. | - | ಗೋಪಿನಾಥ |
| ತಂದೆ / ಗಂಡನ ಹೆಸರು | - | ಬಾಲಚಂದ್ರ ಎಲ್ |
| ವಯಸ್ಸು | - | 43 |
| ಉದ್ಯೋಗ | - | ಪಿಸಿ, ವಿದ್ಯಾನಗರ ಪೊಲೀಸ್ ಠಾಣೆ, ದಾವಣಗೆರೆ |
| ವಾಸ ಸ್ಥಳ | - | ದಾವಣಗೆರೆ |

ಮುಖ್ಯವಿಚಾರಣೆಃ - ಮಾನ್ಯ ಸರ್ಕಾರಿ ಅಭಿಯೋಜಕರಿಂದ

ನಾನು ಕಳೆದ ಎಂಟು ವರ್ಷಗಳಿಂದ ವಿದ್ಯಾನಗರ ಪೊಲೀಸ್ ಠಾಣೆಯಲ್ಲಿ ಕರ್ತವ್ಯ ನಿರ್ಹಿಸುತ್ತಿದ್ದೇನೆ.

ದಿಃ 15-11-2019 ರಂದು ತನಿಖಾಧಿಕಾರಿ ಚಾ.ಸಾ.28 ರವರು ನನ್ನನ್ನು ಕೃತ್ಯ ನಡೆದ ಸ್ಥಳಕ್ಕೆ ಪಂಚನಾಮೆ ಜರುಗಿಸುವ ಸಮಯದಲ್ಲಿ ಪಂಚನಾಮೆ ಬರೆಯಲು ಕರೆದುಕೊಂಡು ಹೋಗಿದ್ದು, ಸದರಿ ಸ್ಥಳದಲ್ಲಿ ನಾನು ನಿ.ಪಿ.4 ರಂತೆ ಪಂಚನಾಮೆಯನ್ನು ಬರೆದಿದ್ದು, ಆ ಸಮಯದಲ್ಲಿ ಚಾ.ಸಾ.20 ರವರು ನಿ.ಪಿ.5 ರಂತೆ ಫೋಟೋ ತೆಗೆದಿರುತ್ತಾರೆ. ಸದರಿ ದಿನ ಚಾ.ಸಾ.28 ರವರು ನನಗೆ ಹೇಳಿದ ಪ್ರಕಾರ ನಾನು ನಿ.ಪಿ.4 ನ್ನು ಬರೆದಿದ್ದು, ಆಗ ಫ್ರಾ.ಸಾ.1 ರವರು ಸ್ಥಳವನ್ನು ತೋರಿಸಿರುತ್ತಾರೆ. ನಿ.ಪಿ.4 ರಲ್ಲಿರುವ ಸಾಕ್ಷಿಯ ಸಹಿಯನ್ನು ನಿ.ಪಿ.4(ಡಿ) ಎಂದು ಗುರುತಿಸಲಾಯಿತು. ಸಾಕ್ಷಿಯು ನಿ.ಪಿ.5 ನ್ನು ನೋಡಿ ಸ್ಥಳವನ್ನು ಗುರುತಿಸಿರುತ್ತಾರೆ.

ನಂತರ ದಿಃ 02-01-2020 ರಂದು ಚಾ.ಸಾ.28 ರವರು ನನ್ನನ್ನು ಅವರ ಕಛೇರಿಗೆ ಕರೆಯಿಸಿಕೊಂಡು ಆರೋಪಿಯ ಧ್ವನಿ ಮಾದರಿಯನ್ನು ಸಂಗ್ರಹಿಸುವ ಸಮಯದಲ್ಲಿ ಚಾ.ಸಾ.28 ರವರ ಆದೇಶದ ಮೇರೆಗೆ ನನ್ನ ಬಾಬ್ತು ಮೊಬೈಲ್ ಮೂಲಕ ನನ್ನ ಮೊಬೈಲ್ ನಲ್ಲಿ ಧ್ವನಿ ಮಾದರಿಯನ್ನು ಸಂಗ್ರಹಿಸಲಾಗಿರುತ್ತದೆ. ನಂತರ ನನ್ನ ಮೊಬೈಲ್ ಅನ್ನು ಗಣಕ ಯಂತ್ರಕ್ಕೆ ಅಳವಡಿಸಿ ನನ್ನ ಮೊಬೈಲ್ ನಲ್ಲಿ ದಾಖಲಾಗಿದ್ದ ಧ್ವನಿ ಮಾದರಿಯನ್ನು ಒಂದು ಸ್ಯಾನ್ ಡಿಸ್ಕ್ ಪೆನ್ ಡ್ರೈವ್ ನಲ್ಲಿ ಯಾವುದೇ ಬದಲಾವಣೆ ಮಾಡದೇ ಸದರಿ ಧ್ವನಿ ಮಾದರಿಯನ್ನು ವರ್ಗಾಯಿಸಿ ಚಾ.ಸಾ.28 ರವರಿಗೆ ನೀಡಿದ್ದು, ಅವರು ಅದನ್ನು ವಿಶ್ಲೇಷಣೆಯ ಉದ್ದೇಶದಿಂದ ಒಂದು ಬಟ್ಟೆಯ ಚೀಲದಲ್ಲಿ ಹಾಕಿ ಅರಗು ಸೀಲು ಮಾಡಿರುತ್ತಾರೆ. ಅಲ್ಲದೇ ಆ ಸಮಯದಲ್ಲಿ ನಿ.ಪಿ.34 ರಂತೆ ಪಂಚನಾಮೆಯನ್ನು ಬರೆಯಲಾಗಿದ್ದು, ನಿ.ಪಿ.35 ಮತ್ತು 36 ರಂತೆ ಫೋಟೋ ತೆಗೆಯಲಾಗಿರುತ್ತದೆ. ನಿ.ಪಿ.34 ರಲ್ಲಿರುವ ಸಾಕ್ಷಿಯ ಸಹಿಯನ್ನು ನಿ.ಪಿ.34(ಸಿ) ಎಂದು ಗುರುತಿಸಲಾಯಿತು. ಅಲ್ಲದೇ ಸಾಕ್ಷಿಯು ನಿ.ಪಿ.35 ಮತ್ತು 36 ನ್ನು ನೋಡಿ ಗುರುತಿಸಿರುತ್ತಾರೆ. ಅಲ್ಲದೇ ಸಾಕ್ಷಿಯು ನಿ.ಪಿ.37 ಪೆನ್ ಡ್ರೈವ್ ಅನ್ನು ನೋಡಿ ಗುರುತಿಸಿರುತ್ತಾರೆ. ಈ ಹಂತದಲ್ಲಿ ನಿ.ಪಿ.37 ನ್ನು ಲ್ಯಾಪ್ ಟ್ಯಾಪ್ ಗೆ ಅಳವಡಿಸಿ ಅದರಲ್ಲಿರುವ ಧ್ವನಿಯನ್ನು ಸಾಕ್ಷಿಗೆ ಕೇಳಿಸಲಾಗಿದ್ದು, ಸಾಕ್ಷಿಯು ಅದನ್ನು ಕೇಳಿ ಅದು ಆರೋಪಿಯ ಧ್ವನಿ ಎಂದು ನುಡಿದಿರುತ್ತಾರೆ.

ಅಲ್ಲದೇ ನಾನು ಚಾ.ಸಾ.28 ರವರಿಗೆ ಸದರಿ ಮಾದರಿ ಧ್ವನಿಯನ್ನು ಗಣಕ ಯಂತ್ರಕ್ಕೆ ಅಳವಡಿಸಿ ಪೆನ್ ಡ್ರೈವ್ ಗೆ ವರ್ಗಾಯಿಸಿದ ಕುರಿತಾಗಿ ನನ್ನ 65 ಬಿ ಪ್ರಮಾಣ ಪತ್ರವನ್ನು ಕೂಡ ಸಲ್ಲಿಸಿರುತ್ತೇನೆ. ಅದನ್ನು ನಿ.ಪಿ.44 ಎಂದು ಗುರುತಿಸಲಾಯಿತು. ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿ.ಪಿ.44(ಎ) ಎಂದು ಗುರುತಿಸಲಾಯಿತು. ಅಲ್ಲದೇ ಸಾಕ್ಷಿಯು ನ್ಯಾಯಾಲಯದ ಮುಂದೆ ಇರುವ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ. ಈ ಕುರಿತು ನಾನು ನನ್ನ ಹೇಳಿಕೆಯನ್ನು ನೀಡಿರುತ್ತೇನೆ.

**ಪಾಟೀಸವಾಲುಃ ಆರೋಪಿ ಪರ ವಕೀಲರಿಂದ.**

ನಾನು ಒಟ್ಟು ಎರಡು ಪಂಚನಾಮೆಗಳಿಗೆ ಸಹಿ ಮಾಡಿರುತ್ತೇನೆ. ಪ್ರತಿ ಠಾಣೆಯ ಪೋಲೀಸ್ ಸಬ್ ಇನ್ಸ್ಪೆಕ್ಟರ್ ಹಾಗೂ ಅವರ ಮೇಲಿನ ಅಧಿಕಾರಿಗಳಿಗೆ ಸರ್ಕಾರದಿಂದ ಪ್ರತ್ಯೇಕವಾದ ಸಿಮ್ ಅನ್ನು ನೀಡಲಾಗಿದೆ ಎಂದರೆ ಸರಿ. ಅದೇ ರೀತಿ ಚಾ.ಸಾ.28 ರವರಿಗೂ ಕೂಡ ಸದರಿ ಸೌಲಭ್ಯ ನೀಡಲಾಗಿದೆ ಎಂದರೆ ಸರಿ. ಯಾವುದಾದರೂ ಸರ್ಕಾರಿ ಕೆಲಸಕ್ಕಾಗಿ ಸದರಿ ಸಿಮ್ ಅನ್ನು ಸದರಿ ಅಧಿಕಾರಿಗಳು ಉಪಯೋಗಿಸಬಹುದು ಎಂದರೆ ಸರಿ. ಆರೋಪಿಯ ಧ್ವನಿ ಮಾದರಿಯನ್ನು ಚಾ.ಸಾ.28 ರವರು ಅವರ ಮೊಬೈಲ್ ನಿಂದಲೂ ಮಾಡಿಕೊಳ್ಳಬಹುದಿತ್ತು ಎಂದರೆ ಸರಿ. ಕೆಲವೊಂದು ಮಿಮಿಕ್ರಿ ಕಲಾವಿದರು ಇನ್ನೊಬ್ಬರ ಧ್ವನಿಯನ್ನು ಮಿಮಿಕ್ರಿ ಮಾಡುವಾಗ ಅವರ ಧ್ವನಿಯನ್ನು ಸಂಗ್ರಹಿಸಿಕೊಳ್ಳಬಹುದು ಎಂದರೆ ಸರಿ. ನಾನು ಈ ದಿನ ಗುರುತಿಸಿದ ಧ್ವನಿ ಮಾದರಿ ಆರೋಪಿಗೆ ಸಂಬಂಧಿಸಿದ ಧ್ವನಿ ಮಾದರಿ ಅಲ್ಲ ಎಂದರೆ ಸರಿಯಲ್ಲ.

ನಿ.ಪಿ.37 ಪೆನ್ ಡ್ರೈವ್ ಅನ್ನು ಎಲ್ಲಿಂದ ಖರೀದಿಸಲಾಗಿದೆ ಮತ್ತು ಅದು ಹೊಸ ಪೆನ್ ಡ್ರೈವ್ ಅಥವಾ ಹಳೆಯ ಪೆನ್ ಡ್ರೈವ್ ಎನ್ನುವ ಕುರಿತಾಗಿ ನಾನು ನಿ.ಪಿ.44 ರಲ್ಲಿ ನಮೂದಿಸಿಲ್ಲ ಎಂದರೆ ಸರಿ. ಸಾಕ್ಷಿಯು ಮುಂದುವರೆದು ಅದು ಚಾ.ಸಾ.28 ರವರಿಗೆ ತಿಳಿದಿದ್ದು, ಅವರೇ ನನಗೆ ಪೆನ್ ಡ್ರೈವ್ ನೀಡಿದ್ದಾರೆ ಎಂದು ನುಡಿದಿರುತ್ತಾರೆ. ನಾನು ಗಣಕ ಯಂತ್ರ ಚಾಲನೆಯ ಕುರಿತು ವಿಶೇಷ ತರಭೇತಿ ಪಡೆದಿಲ್ಲ, ಆದರೆ ಇಲಾಖೆಯಿಂದ ನೀಡಲ್ಪಡುವ ತರಭೇತಿ ಪಡೆದುಕೊಂಡಿರುತ್ತೇನೆ. ನನಗೆ ಗಣಕ ಯಂತ್ರ ಚಾಲನೆಯ ಕುರಿತು ಯಾವುದೇ ಮಾಹಿತಿ ಇಲ್ಲದೇ ಇದ್ದರೂ ಕೂಡ ಚಾ.ಸಾ.28 ರವರ ಮಾತನ್ನು ಕೇಳಿಕೊಂಡು ಸುಳ್ಳು ಸಂಗತಿಗಳಿಂದ ಕೂಡಿದ ನಿ.ಪಿ.44 ನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ. ನಾನು ಯಾವುದೇ ಹೇಳಿಕೆಯನ್ನು ಈ ಪ್ರಕರಣದಲ್ಲಿ ನೀಡಿರುವುದಿಲ್ಲ ಎಂದರೆ ಸರಿಯಲ್ಲ. ಅದೇ ರೀತಿ ನಾನು ನನ್ನ ಮೊಬೈಲ್ ಮೂಲಕ ಆರೋಪಿಯ ಧ್ವನಿ ಮಾದರಿಯನ್ನು ರೆಕಾರ್ಡಿಂಗ್ ಮಾಡಿಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಹಿರಿಯ ಅಧಿಕಾರಿಗಳ ಮಾತನ್ನು ಕೇಳಿಕೊಂಡು ಸುಳ್ಳು ಸಾಕ್ಷಿಯನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆಃ- ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ . ಹೇ. ಕೇ. ಸರಿಯಾಗಿದೆ.

2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ,
ದಾವಣಗೆರೆ.